O. S. 164/2015

D.W.1

**ಸಾಕ್ಷಿಯನ್ನು ದಿನಾಂಕಃ 19-06-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಶ್ರೀ.ಬಿ.ಆರ್.ಜಿ.ವಕೀಲರವರಿಂದಃ**

ವಾದಿ ರೇಣುಕಮ್ಮನ ಗಂಡನ ಹೆಸರು ರಂಗಪ್ಪ. ರಂಗಪ್ಪನ ತಂದೆಯ ಹೆಸರು ಕೆಂಚಪ್ಪ ಎಂದರೆ ಸರಿ. ಸದರಿ ಕೆಂಚಪ್ಪನ ತಾಯಿಯ ಹೆಸರು ಗೋಣಮ್ಮ ಎಂದರೆ ಸರಿ. ಕೆಂಚಪ್ಪನ ತಂದೆಯ ಹೆಸರೂ ರಂಗಪ್ಪ ಇರುತ್ತದೆ ಎಂದರೆ ಸರಿ. ಕೆಂಚಪ್ಪನ ಅಜ್ಜನ ಹೆಸರೂ ಕೂಡ ರಂಗಪ್ಪ ಎಂದರೆ ಸರಿ. ಕೆಂಚಪ್ಪನ ಅಜ್ಜಿಯ ಹೆಸರು ಕೊಟ್ರಮ್ಮ ಎಂದರೆ ನನಗೆ ಗೊತ್ತಿರುವುದಿಲ್ಲ. ಕೆಂಚಪ್ಪನ ಅಜ್ಜ ರಂಗಪ್ಪನಿಗೆ ಕೊಟ್ರಬಸಪ್ಪ ಮತ್ತು ರಂಗಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸದರಿ ಕೊಟ್ರಬಸಪ್ಪನು ಬಸಮ್ಮಳನ್ನು ಮದುವೆಯಾಗಿದ್ದು, ಅವರಿಗೆ ಮಕ್ಕಳಾಗದ ಕಾರಣ ರತ್ನಮ್ಮ ಎನ್ನುವವರನ್ನು ವಿವಾಹವಾಗಿರುತ್ತಾನೆ ಎಂದರೆ ಸರಿ. 2 ನೇ ಹೆಂಡತಿ ರತ್ನಮ್ಮಳಿಗೆ ಮಕ್ಕಳಾಗಿರಲಿಲ್ಲ ಎಂದರೆ ಸರಿ. ವಾದಿಗೆ ಕರಿಬಸಮ್ಮ ಮತ್ತು ಕೆಂಚಪ್ಪ ಎನ್ನುವ ಇಬ್ಬರು ಮಕ್ಕಳು ಇರುವರು ಎಂದರೆ ಸರಿ. ನಾನು ವಾದಿಯ ಕುಟುಂಬದ ವಂಶವೃಕ್ಷಕ್ಕೆ ಸಂಬಂದಪಡದ ವ್ಯಕ್ತಿ ಎಂದರೆ ಸರಿಯಲ್ಲ. ವಾದಿ ರೇಣುಕಮ್ಮ ನನ್ನ ಅಣ್ಣ ಮಗಳು ಇರುತ್ತಾಳೆ. ನಾನು ಈ ದಾವೆಯಲ್ಲಿ ಸಲ್ಲಿಸಿರುವ ವಂಶವೃಕ್ಷ ನಿಡಿ-2 ರಲ್ಲಿ ರೇಣುಕಮ್ಮ ಗಂಡನ ಹೆಸರು ಕಂಡುಬರುವುದಿಲ್ಲ ಎಂದರೆ ಸರಿ. ರೇಣುಕಮ್ಮನ ತಂದೆಯ ಹೆಸರು ಹನುಮಂತಪ್ಪ ಎಂದು ಇರುತ್ತದೆ. ಹನುಮಂತಪ್ಪನಿಗೆ ಇಬ್ಬರು ಗಂಡು ಹಾಗೂ ಒಂದು ಹೆಣ್ಣು ಮಗಳು ಇರುತ್ತಾರೆ. ಅದನ್ನು ನಿಡಿ-2 ರಲ್ಲಿ ಕಾಣಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯ ಸರ್ವೆ ನಂ.177 ಕ್ಕೆ ಸಂಬಂದಿಸಿದಂತೆ 2 ಎಕರೆ 90 ಸೆಂಟ್ಸ್ ಗೆ ಈ ದಾವೆಯನ್ನು ಮಾಡಿರುವಳು. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ-ಕೆಂಚಪ್ಪನ ಹೊಲ ಇರುತ್ತದೆ. ಪಶ್ಚಿಮಕ್ಕೆ-ದೊಡ್ಡತಿಪ್ಪಣ್ಣರ ಹೊಲ ಇರುತ್ತದೆ. ಉತ್ತರಕ್ಕೆ-ಇದೇ ಸರ್ವೆ ನಂಬರ್ ಪೈಕಿ ವಾದಿಯ ಗಂಡನಿಂದ ವಾದಿಗೆ ಬಂದಿರುವ ಹೊಲ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ-ಸಾವಿತ್ರಮ್ಮನ ಹೊಲ ಇರುತ್ತದೆ ಎಂದರೆ ಸರಿ. ಈ ಚಕ್ಕುಬಂದಿ ಮಧ್ಯದ ಜಮೀನನ್ನು ವಾದಿಯೇ ಸಾಗುವಳಿ ಮಾಡುತ್ತಿದ್ದಾಳೆ ಎಂದರೆ ಸರಿ.

2. ನಾನು ಹಾಜರುಪಡಿಸಿರುವ ಮೃತ್ಯುಪತ್ರದಲ್ಲಿ ನಮೂದಿಸಿದ ಚಕ್ಕುಬಂದಿ ಪೂರ್ವಕ್ಕೆ-ಸಂಗ್ಲಿ ಜೆಂಕಪ್ಪ ಇವರ ಜಮೀನು ಎಂದು ಬರೆದಿದೆ ಎಂದರೆ ಸರಿ. ಪಶ್ಚಿಮಕ್ಕೆ-ಮಾಳಗಿ ಹಾಲಪ್ಪನ ಜಮೀನು ಎಂದು ಬರೆದಿದೆ ಎಂದರೆ ಸರಿ. ಉತ್ತರಕ್ಕೆ-ಇದೇ ಸರ್ವೆ ನಂಬರ್ ಪೈಕಿ ರಂಗಪ್ಪರವರ ಜಮೀನು ಎಂದು ಬರೆದಿದೆ ಎಂದರೆ ಸರಿ. ಸದರಿ ರಂಗಪ್ಪ ಎಂದರೆ ವಾದಿಯ ಗಂಡ ಎಂದರೆ ಸಾಕ್ಷಿಯು ಪ್ರಥಮಥ ಹೌದು ಎಂದು ನುಡಿದು, ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ-ಲಲಿತಮ್ಮನ ಜಮೀನು ಎಂದು ಮೃತ್ಯುಪತ್ರದಲ್ಲಿ ಬರೆದಿದೆ ಎಂದರೆ ಸಾಕ್ಷಿಯು ಲಲಿತಮ್ಮ ಎಂಬುವವರ ಜಮೀನು

O. S. 164/2015

D.W.1

ದಕ್ಷಿಣಕ್ಕೆ ಇರುವುದಿಲ್ಲ ಎಂದು ನುಡಿದರು. ನನಗೆ ಈ ದಾವಾ ಆಸ್ತಿಯ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಊಹಾಪೋಹವಾಗಿ ಮೃತ್ಯುಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರದಲ್ಲಿ ಸಾಕ್ಷಿ ಎಂದು ಸಹಿ ಮಾಡಿರುವ ಸಾಕ್ಷಿದಾರರಾದ ಚಂದ್ರಪ್ಪ ಮತ್ತು ಮಲ್ಲಿಕಾರ್ಜುನರವರು ಉಚ್ಚಂಗಿದುರ್ಗ ಗ್ರಾಮದವರು ಆಗಿರುತ್ತಾರೆ. ನಮ್ಮ ಸ್ವಂತ ಊರು ಉಚ್ಚಂಗಿದುರ್ಗ ಎಂದರೆ ಸರಿ. ಚಂದ್ರಪ್ಪ ಮತ್ತು ಮಲ್ಲಿಕಾರ್ಜುನ, ಪತ್ರಬರಹಗಾರರಾದ ಎಂ.ಬಸವರಾಜಪ್ಪ ಇವರು ನಮ್ಮ ಪರಿಚಯದವರು ಎಂದರೆ ಸರಿ. ಸದರಿಯವರೇ ಈ ರೀತಿ ಮೃತ್ಯುಪತ್ರವನ್ನು ಹೇಳಿಬರೆಸಿರುತ್ತಾರೆ ಎಂದರೆ ಸರಿ. ಸದರಿ ಸಾಕ್ಷಿದಾರ ಚಂದ್ರಪ್ಪನು ನನಗೆ ತಮ್ಮನಾಗಬೇಕು. ಚಂದ್ರಪ್ಪ ಮತ್ತು ಮಲ್ಲಿಕಾರ್ಜುನ, ಪತ್ರಬರಹಗಾರರಾದ ಎಂ.ಬಸವರಾಜಪ್ಪ ಇವರು ನನಗೆ ವಿಶ್ವಾಸಿಕರಾಗಿರುವುದರಿಂದ ಅವರೆಲ್ಲಾರ ಸಲಹೆಯ ಮೇರೆಗೆ ನಾವೇಲ್ಲಾರು ಮೃತ್ಯುಪತ್ರವನ್ನು ಬರೆಸಿ ನೊಂದಣಿ ಮಾಡಿಸಿರುತ್ತೇವೆ ಎಂದರೆ ಸರಿ. ರತ್ನಮ್ಮಳಿಗೆ ಮಾತನಾಡಲು ಬರುತ್ತಿರಲಿಲ್ಲ. ಅವರಿಗೆ 3 ವರ್ಷ ಹಿಂದೆ ಪಾರ್ಶ್ವವಾಯುವಾಗಿತ್ತು. ಮೃತ್ಯುಪತ್ರನೊಂದಡಣಿ ಮಾಡುವ ಕಾಲಕ್ಕೆ ಆಕೆಗೆ ಪಾರ್ಶ್ವವಾಯುವಿದ್ದ ಕಾರಣ ಆರಾಮ ಇರಲಿಲ್ಲ ಎಂದರೆ ಸರಿ. ರತ್ನಮ್ಮಳಿಗೆ ಯಾವುದೇ ಸೂಕ್ತ ಮಾಹಿತಿಯನ್ನು ಕೊಡದೇ, ಆಕೆಯನ್ನು ನೊಂದಣಿ ಕಚೇರಿಗೆ ಕರೆದುಕೊಂಡು ಬಂದು ನಾನು, ಸಾಕ್ಷಿದಾರರು ಹಾಗೂ ಬರಹಗಾರರು ಸೇರಿಕೊಂಡು ಮೃತ್ಯುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ ವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

19-06-2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**